**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:4**

**ಎಸ್.ಸಿ. ಸಂಖ್ಯೆ: 530/2022 ಸಿಡಬ್ಲ್ಯೂ:5**

**ಸಾಕ್ಷಿದಾರರ ಹೆಸರು : ಶಂಕರ ಅಸ್ಲಾ**

**ತಂದೆ ಹೆಸರು : ಕೊರಗ ಅಸ್ಲಾ**

**ವಯಸ್ಸು : 60**

**ವೃತ್ತಿ : ಕೂಲಿ**

**ವಾಸ : ದೇವರಬಾಳು**

**ದಿನಾಂಕ: 03-06-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ಮೊದಲು ಎಡಗೇರೆ ಕೇಶವ ಯಡಿಯಾಳ ರವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ಸುಮಾರು 7 ವರ್ಷಗಳ ಹಿಂದೆ ಕೇಶವ ಯಡಿಯಾಳ ಇವರ ಮನೆಯಲ್ಲಿ ಏನು ಘಟನೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ದಿನಾಂಕ:12-01-2005 ರಂದು ಬೆಳಿಗ್ಗೆ 7.15 ಕ್ಕೆ ಕೇಶವ ಯಡಿಯಾಳರ ಮನೆಯಲ್ಲಿ 7 ಜನ ಗಂಡಸರು ಒಬ್ಬ ಹೆಂಗಸು ಬ್ಯಾಗು ಹಾಗೂ ಕೋವಿ ಹಿಡಿದುಕೊಂಡು ಬಂದು ಅವರು ತಾವು ನಕ್ಸಲೀಯರು ಅಂತ ಹೇಳಿ ಕೇಶವ ಯಡಿಯಾಳರಿಗೆ ಬೆದರಿಕೆ ಹಾಕಿದ್ದು ನನಗೆ ಗೊತ್ತಿಲ್ಲ. ಆ ಘಟನೆಯನ್ನು ನಾನು ನೋಡಿಲ್ಲ. ಈ ಘಟನೆ ಬಗ್ಗೆ ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ದಿನಾಂಕ:15-01-2005 ರಂದು ಪೋಲೀಸರು ನನ್ನ ಯಾವುದೇ ಹೇಳಿಕೆ ತೆಗೆದುಕೊಂಡಿಲ್ಲ. ಪೋಲೀಸರು ನನಗೆ ದಿನಾಂಕ:09-05-2009 ರಂದು ಯಾವುದೇ ಫೋಟೋಗಳನ್ನು ತೋರಿಸಿ ಯಾರನ್ನೂ ಗುರುತಿಸಲು ಕೇಳಿಕೊಂಡಿಲ್ಲ. ಮತ್ತು ಆ ಸಮಯದಲ್ಲಿ ನಾನು ಯಾವುದೇ ಫೋಟೋಗಳನ್ನು ಗುರುತಿಸಿ ಹೇಳಿಕೆ ನೀಡಿರುವುದಿಲ್ಲ. ಆ ವ್ಯಕ್ತಿಗಳು ಸರಕಾರದ ವಿರುದ್ಧ ಘೋಷಣೆ ಕೂಗಿದ್ದು, ಸರಕಾರದ ವಿರುದ್ಧ ಹಳ್ಳಿ ಜನರನ್ನು ಎತ್ತಿಕಟ್ಟಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ನಾನು ನೋಡಿಲ್ಲ ಮತ್ತು ಈ ಬಗ್ಗೆ ನನಗೆ ಗೊತ್ತಿಲ್ಲ.

ಪೋಲೀಸರು ನನಗೆ ಯಾವುದೇ ವ್ಯಕ್ತಿಯನ್ನು ಕೇಶವ ಯಡಿಯಾಳ ರವರ ಮನೆಯಲ್ಲಿ ತೋರಿಸಿರುವುದಿಲ್ಲ. ಆ ಸಮಯದಲ್ಲಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ವಿ.ಸಿ ಮುಖಾಂತರ ಹಾಜರುಪಡಿಸಿದ ಆರೋಪಿ ಬಿ ಜಿ ಕೃಷ್ಣಮೂರ್ತಿ ಈತನನ್ನು ನೋಡಿ ಗುರುತಿಸಿರುವುದಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸರ್ಕಾರಿ ಅಭಿಯೋಜಕರಿಂದ**

ನಾನು ಕೇಶವ ಯಡಿಯಾಳ ರವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದಾಗ ದಿನಾಂಕಃ12-01-2005 ರಂದು ಬೆಳಿಗ್ಗೆ 7.15 ಕ್ಕೆ ಕೇಶವ ಯಡಿಯಾಳರ ಮನೆಗೆ 7 ಜನ ಗಂಡಸರು ಒಬ್ಬ ಹೆಂಗಸು ಬಂದಿದ್ದು ಅವರು ಬ್ಯಾಗು ಹಾಗೂ ಕೋವಿ ಹಿಡಿದುಕೊಂಡು ಬಂದಿದ್ದು, ಗಂಡಸರು ಹಸಿರು ಬಣ್ಣದ ಪ್ಯಾಂಟು ಮತ್ತು ಶರ್ಟು ಧರಿಸಿದ್ದರು ಹೆಂಗಸರು ಕಂದು ಬಣ್ಣದ ಪ್ಯಾಂಟ್ ಮತ್ತು ಶರ್ಟು ಧರಿಸಿದ್ದರು ಎಂದರೆ ಸರಿ ಅಲ್ಲಾ. ಮತ್ತು ಆ ರೀತಿ ಬಂದವರು ತಾವು ನಕ್ಸಲೀಯರು ಅಂತ ಹೇಳಿ ಕೇಶವ ಯಡಿಯಾಳರಿಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ ಅಲ್ಲಾ. ಈ ಬಗ್ಗೆ ನಾನು ದಿನಾಂಕಃ15-01-2005 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿಃ09-05-2009 ರಂದು ಪೋಲೀಸರು ತೋರಿಸಿದ ನಕ್ಸಲರ ಫೋಟೋಗಳ ಯಾದಿಯಲ್ಲಿ ಕೇಶವ ಯಡಿಯಾಳ ಅಂಗಳಕ್ಕೆ ಬಂದಿದ್ದ ನಕ್ಸಲರನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ನಕ್ಸಲರ ಯಾದಿಯಲ್ಲಿ ನಾನು ಮಹೇಶ, ಪ್ರದೀಪ, ಹೊರಳೆ ಸರೋಜಾ, ವಿಕ್ರಮ್ ಗೌಡ, ವಸಂತ, ಬಿ ಜಿ ಕೃಷ್ಣಮೂರ್ತಿ ಮತ್ತು ನೀಲಗುಳಿ ಪದ್ಮನಾಭ ರವರನ್ನು ಗುರುತಿಸಿ ಸದ್ರಿಯವರು ಕೈಯಲ್ಲಿ ಕೋವಿ ಹಿಡಿದು ಸರಕಾರದ ನಿಷೇಧಿತ ಸಂಘಟನೆಯೊಂದಿಗೆ ಸೇರಿಕೊಂಡು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂದು ದಿನಾಂಕಃ09-05-2009 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ದಿನಾಂಕ:15-07-2022 ರಂದು ಕೇಶವ ಯಡಿಯಾಳ ರವರ ಮನೆಗೆ ಪೋಲೀಸರು ಈ ದಿನ ನ್ಯಾಯಾಲಯದಲ್ಲಿ ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿ ಬಿ ಜಿ ಕೃಷ್ಣಮೂರ್ತಿ ಈತನನ್ನು ಕರೆದುಕೊಂಡು ಬಂದಿದ್ದು ನಾನು ಆತನನ್ನು ನೋಡಿ 2005 ರಲ್ಲಿ ಪೋಲೀಸರು ನನಗೆ ತೋರಿಸಿದ ಭಾವಚಿತ್ರದ ಯಾದಿಯಲ್ಲಿ ನಾನು ನೋಡಿ ಗುರುತಿಸಿದ ವ್ಯಕ್ತಿ ಈತನೇ ಆಗಿರುತ್ತಾನೆ ಎಂದು ದಿನಾಂಕ:15-07-2022 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ.10 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಪಾಟೀ ಸವಾಲು:</u> <u>ಆರೋಪಿ ಪರ ಶ್ರೀ ಎಂ ಆರ್ ಕೆ ಟಿ ವಕೀಲರಿಂದ</u>

ನಾನು ಕೇಶವ ಯಡಿಯಾಳ ರವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ದಿನಾಂಕ:15-07-2022 ರಂದು ಕೇಶವ ಯಡಿಯಾಳ ರವರ ಮನೆಗೆ ಪೋಲೀಸರು ಈ ದಿನ ನ್ಯಾಯಾಲಯದಲ್ಲಿ ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿ ಬಿ ಜಿ ಕೃಷ್ಣಮೂರ್ತಿ ಈತನನ್ನು ಕರೆದುಕೊಂಡು ಬಂದಿಲ್ಲ ಎಂದರೆ ಸರಿ ಅಲ್ಲಾ. ನ್ಯಾಯಾಲಯದ ಮುಂದೆ ವಿ.ಸಿ ಮುಖಾಂತರ ಹಾಜರುಪಡಿಸಿದ ಆರೋಪಿತನನ್ನು ನಾನು ಇವತ್ತೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

<u>ಮರು ವಿಚಾರಣೆ:</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**